ನೋಡಿದರು. ರಶ್ ಇಲ್ಲದ್ದಕ್ಕೇ ಇರಬೇಕು, ಕೇವಲ ಇಬ್ಬರು ಬೇರರ್‌ಗಳು ಮಾತ್ರ ಓಡಾಡುತ್ತಿದ್ದರು. ಹತ್ತಿರ ಕೂತ ನರ್ತಕಿಯ ಬಗ್ಗೆ ವಿಶೇಷ ಒಲವು ತೋರಿಸದೆ ನಟರಾಜ್‌ರು ಜೇಬಿನಿಂದ ಫೋಟೊ ಹೊರತೆಗೆದರು. ಸೂಜಿಮೊನೆಯ ಪೆನ್ನಿನಿಂದ ಆ ಫೋಟೊ ಮುಖಕ್ಕೆ ಮೆತ್ತಗೆ ಕುರುಚಲು ಗಡ್ಡ ಬರೆದರು. ಈಗ ಹೇಗನ್ನಿಸುತ್ತದೆ ಎಂದು ಅದನ್ನೇ ಸ್ವಲ್ಪ ಹೊತ್ತು ನೋಡಿದರು.

ತನ್ನೊಂದಿಗೆ ಸಲುಗೆ ತೋರಿಸಿದ ಈ ವ್ಯಕ್ತಿಯನ್ನು ಮಾತನಾಡಿಸಲೆಂಬಂತೆ 'ಕಿಸ್ ಕಾಹೈ ಸಾಬ್ ಏ ಫೋಟೊ?' ಎಂದು ಹಿಂದಿಯಲ್ಲಿ ಮಾತನಾಡುತ್ತ ನರ್ತಕಿ ಅವರ ಕೈಗೆ ಜೋತು ಬಿದ್ದು ಕಿಸಕ್ಕನೆ ನಕ್ಕಳು. ಸ್ವಲ್ಪದರಲ್ಲಿ ಊಟ ಬಂತು. ಫೋಟೊವನ್ನು ಜೇಬಿನಲ್ಲಿಡುತ್ತಾ ನಟರಾಜ್ ನಿಧಾನವಾಗಿ ಗಂಭೀರ ಧ್ವನಿಯಲ್ಲಿ, 'ನನ್ನ ತಮ್ಮ, ಕಾಣೆಯಾಗಿ ಇಂದಿಗೆ ಮೂರು ವರ್ಷ ಆಯ್ತು', ಕಣ್ಣೊರೆಸಿಕೊಂಡರು.

'ಸಾರಿ ಸರ್, ನಾ ಇನ್ನೊಮ್ಮೆ ನೋಡಲೇ ನಿಮ್ಮ ತಮ್ಮನನ್ನು?' ನಟರಾಜ್ ಜೇಬಿನಿಂದ ಫೋಟೊ ತೆಗೆದು ಆಕೆಯ ಕೈಗಿತ್ತರು. ಆಕೆ ಅದನ್ನೇ ನೋಡುತ್ತ, 'ಸರ್, ಇದು ನಿಮ್ಮ ತಮ್ಮನ ಚಿತ್ರವೇ?' ಎಂದು ಅಚ್ಚರಿ ವ್ಯಕ್ತಪಡಿಸಿದಳು.

'ಹೌದು. ನಿನಗ್ಯಾಕೆ ಸಂದೇಹ?' ನಟರಾಜ್ ಪ್ರಶ್ನಿಸಿದರು.

'ಸಾರಿ ಸರ್, ಇಲ್ಲೊಬ್ಬ ಇದ್ದಾನೆ, ಇದೇ ತರಹ. ಅವನೋಂತ ಭಾವಿಸಿದೆ' ಎನ್ನುತ್ತಾ ಚಿತ್ರವನ್ನು ಹಿಂದಿರುಗಿಸಿದಳು.

'ಹೌದೆ? ಅವನ ಮುಖ ಇದೇ ಥರ ಇದೆಯಾ?'

'ಸುಮಾರು ಇದೇ ಥರ ಸರ್.'

'ನಾನವನನ್ನು ನೋಡಬಹುದೆ?'

'ಯಾಕೆ ಸರ್?'

'ನನ್ನ ತಮ್ಮ ಕಾಣೆಯಾದಾಗ ನಾನು ಊರಲ್ಲಿರಲಿಲ್ಲ. ವಿದೇಶದಲ್ಲಿದ್ದೆ. ನಾನು ಊರಿಗೆ ಬಂದ ಮೇಲೆ ನೋಡೋದಕ್ಕೆ ಸಿಕ್ಕಿದ್ದು ಅವನ ಈ ಚಿತ್ರ ಮಾತ್ರ. ಅವನ ಹಾಗೆಯೇ ಒಬ್ಬ ಇಲ್ಲಿದ್ದಾನೇಂತಂದ್ರೆ ಅವನನ್ನೊಮ್ಮೆ ನೋಡಬಹುದಲ್ಲ. ಅವನಲ್ಲಿ ನನ್ನ ತಮ್ಮನನ್ನು ಕಾಣಬಹುದೋ ಏನೋ ಅಂತ ಆಸೆಯಾಯಿತು.'

'ಮಧ್ಯಾಹ್ನ ಅವನಿಗೆ ಡ್ಯೂಟಿ ಇರೋದಿಲ್ಲ. ಎಲ್ಲೋ ತಿರುಗಾಡೋದಕ್ಕೆ ಹೋಗಿರ್ಬೋದು. ಬಹಳ ಚೂಟಿ ಹುಡುಗ ಸರ್. ರಾತ್ರಿ ಸಿಗ್ತಾನೆ'.

'ಏನವನ ಹೆಸರು?'

'ಚಾಕೊ ಸರ್.'

'ಯಾರೋ ಏನೊ, ಹೋಗ್ಲಿ ಬಿಡು' ನಟರಾಜ್ ಆಕೆಯ ಬಗ್ಗೆ ಯಾವ ಆಸಕ್ತಿಯನ್ನೂ ತೋರಿಸದೆ ಊಟ ಮಾಡತೊಡಗಿದರು.

'ನಿಮಗೆ ಬೇಜಾರಾಗಿದ್ರೆ ನನ್ನ ಪ್ಲೇಟ್ ತಗೊಂಡು ಒಳಗಡೆ ಹೋಗ್ತೇನೆ ಸರ್, ಅಲ್ಲಿ ನನ್ನ ರೂಮಿದೆ.'

'ನಿನ್ನಿಷ್ಟ. ಹಾಗೇ ಮಾಡು.'

'ಬಿಲ್ಲು ಸರ್.'

'ನಾನು ಕೊಡ್ತೇನಲ್ಲ.'

'ಥಾಂಕ್ಯೂ ಸೋ ಮಚ್ ಸರ್' ಎನ್ನುತ್ತಾ ಎದ್ದು ಮೂಲೆಯಲ್ಲಿ ಒಂಟಿಯಾಗಿ ಕುಳಿತಿದ್ದ ಇನ್ನೊಬ್ಬಾತನಿಗೆ ಅಂಟಿ ಕುಳಿತಳು. ನಟರಾಜ್‌ಗೆ ಹೆಚ್ಚು ಮುಂದುವರಿಸೋದು ಬೇಡವಾಗಿತ್ತು. ಬಿಲ್ ಕೊಟ್ಟು ನೇರವಾಗಿ ಪೊಲೀಸ್ ಸ್ಟೇಷನ್‌ಗೆ ಬಂದರು. ಕತ್ತಲೆಯಾಗುತ್ತಲೆ ಹೋಟೆಲನ್ನು ಬಳಿಸಿ ನಿಲ್ಲುವಂತೆ ಪೊಲೀಸರಿಗೆ ಆದೇಶಿಸಿದರು. ಕತ್ತಲಾಯಿತು. ನಟರಾಜ್ ಮತ್ತೆ ಅದೇ ಹೋಟೆಲಿನ ಮಧ್ಯಾಹ್ನದ ಅದೇ ಟೇಬಲ್‌ಗೆ ಬಂದರು. ಸ್ವಲ್ಪ ಹೊತ್ತಿನಲ್ಲೇ ಬೇರರ್‌ಗಳ ಸಾಲು ಮದ್ಯದೊಂದಿಗೆ ಪ್ರವೇಶಿಸಿದವು. ಆರ್ಡರ್ ತಗೊಂಡವರು ಬೇರೆಯಾದ್ದರಿಂದ ಬೇರರ್‌ಗಳು ತಾವು ತಂದ ಮದ್ಯವನ್ನಷ್ಟೇ ಮೇಜಿನ ಮೇಲಿಟ್ಟು ಹಿಂದೆ ಸರಿದರು.

'ದೀಪೂ' ಥಟ್ಟನೆ ನಟರಾಜ್ ಕರೆದರು. ಆತ ಒಂದು ಕ್ಷಣ ತಿರುಗಿ ನಟರಾಜರನ್ನು ನೋಡಿ, ಮರುಕ್ಷಣವೇ ಕಿಚನ್‌ಗೆ ನುಗ್ಗಲೆತ್ನಿಸಿದ. ಮಿಂಚಿನಂತೆ ಬಳಿ ಸರಿದ ನಟರಾಜರು ಅವನ ಕಿವಿಯಲ್ಲಿ ಉಸುರಿದರು:

'ತಪ್ಪಿಸುವ ಪ್ರಯತ್ನ ಮಾಡಿದೀ ಜೋಕೆ. ಸುತ್ತಲೂ ಪೊಲೀಸರು ಕಾವಲಿದ್ದಾರೆ. ಮರ್ಯಾದೆಯಾಗಿ ನನ್ನ ಜೊತೆ ಹೊರಟು ಬಾ. ನೀನು ಉಳಿದುಕೊಳ್ಳುತ್ತೀಯಾ. ಇಲ್ಲದಿದ್ದರೆ...'

'ಸರ್ ಸರ್, ದಯವಿಟ್ಟು ಗಲಾಟೆ ಮಾಡಬೇಡಿ ಸರ್, ನಾನು ಕಿಚನ್‌ಗೆ ಹೋಗಿ ಡ್ರೆಸ್ ಬದಲಾಯಿಸಿ ಬಂದುಬಿಡ್ತೇನೆ. ನನ್ನ ಮಾತನ್ನು ನಂಬಿ ಸರ್' ದೀಪೂ ಅಂಗಲಾಚಿದ.

'ಆಲ್‌ರೈಟ್. ನಾನು ಇಲ್ಲೇ ಕೆಳಗಡೆ ಕಾಯುತ್ತಿರುತ್ತೇನೆ.'

'ಆಯ್ತು ಸರ್' ದೀಪೂ ಒಳಕ್ಕೆ ಓಡಿದ.

ಕಿಟಕಿಯೆಡೆಯಿಂದ ನಟರಾಜ್ ಹೊರಗೊಮ್ಮೆ ದೃಷ್ಟಿ ಹಾಯಿಸಿದರು. ಆ ಕತ್ತಲಲ್ಲೂ ಪೊಲೀಸರು ಸುತ್ತ ಬಂದೂಕಿನೊಂದಿಗೆ ನಿಂತಿರುವುದು ಕಾಣಿಸಿತು. ಇನ್ನೇನು ದೀಪೂ ಹೊರಬರುವುದೊಂದೇ ಬಾಕಿ ಎಂದುಕೊಂಡರು. ಎಷ್ಟು ಹೊತ್ತಾದರೂ ದೀಪೂ ಹೊರ ಬರಲೇ ಇಲ್ಲ. ನಟರಾಜರು ಬೇರೆ ದಾರಿ ಕಾಣದೆ ಸಬ್‌ಇನ್ಸ್‌ಪೆಕ್ಟರ್ ಜೊತೆಗೆ ಹೋಟೆಲ್‌ನ ಒಳನುಗ್ಗಿದರು. ರೈಡಿಂಗ್‌ನ ವಾರ್ತೆ ಹಬ್ಬುತ್ತಲೇ ಇಡಿಯ ಹೋಟೆಲ್ ಕಂಪಿಸತೊಡಗಿತು. ದೀಪೂ ಒಳಗಡೆಯಿಂದಲೇ ಅಸಹಾಯಕ ಹೋರಾಟ ನಡೆಸಿದ. ಒಳಗಿನ ಜನರನ್ನು ಕಾನ್ಸ್‌ಟೇಬಲ್‌ಗಳ ಸಹಾಯದಿಂದ ಹೊರಗಡೆ ಕಳುಹಿಸಿ ಗುಂಡಿನ ಸದ್ದು ಮಾಡಿದರು. ಒಂದಷ್ಟು ಹೊತ್ತಿನ ಸದ್ದುಗದ್ದಲಗಳ ತರುವಾಯ ಅನ್ಯದಾರಿ ಕಾಣದೆ ದೀಪೂ ಪೊಲೀಸರಿಗೆ ಶರಣಾದ.

## 20

'ಅಮ್ಮಾವ್ರ ಏಟು ತೀರ ಅನಿರೀಕ್ಷಿತವಾಗಿತ್ತು. ಅವರು ನನಗೆ ಕೊಟ್ಟ ಸಲುಗೆಗೆ ನಾನು ಅಪಾರ್ಥ ಕಲ್ಪಿಸಿದ್ದೆ. ಅದುವೇ ನಾನು ಮಾಡಿದ ದೊಡ್ಡ ತಪ್ಪು. ಆ ಏಟಿನಿಂದಾಗಿ ನಾನು ಬಹಳ ಅವಮಾನಿತನಾಗಿದ್ದೆ. ಮತ್ತೆ ಅಮ್ಮಾವ್ರಿಗೆ ಮುಖ ತೋರಿಸಲು ಮನಸ್ಸಾಗಲಿಲ್ಲ. ಹಣ್ಣು, ತರಕಾರಿ ತರುವ ನೆಪದಲ್ಲಿ ವೀರನಗರಕ್ಕೆ ಹೋದೆ. ಅಲ್ಲಿಂದ ನೆಟ್ಟಗೆ ಊರಿಗೆ ಹೋಗೋಣವೆನಿಸಿತು.

'ಯಾರಿದ್ದಾರೆ ಊರಲ್ಲಿ? ಇದ್ದ ಪುಟ್ಟ ಮನೆಯೂ ಅನ್ಯರ ವಶವಾಗಿದೆ. ನನ್ನವರು ಎಂಬುವರಿಲ್ಲ. ವೀರನಗರದಲ್ಲಿ ಇರುವುದಂತೂ ಮನಸ್ಸಿಗೆ ಹಿಡಿಸದ ವಿಚಾರ. ಏನು ಮಾಡೋಣ ಎಂದು ಯೋಚಿಸುತ್ತಿದ್ದಂತೆಯೇ ವೀರನಗರ ತಲುಪಿದೆ. ಕೆಲವು ಗೆಳೆಯರು ಜೊತೆ ಸೇರಿದರು. ನನ್ನಲ್ಲಾದ ಬದಲಾವಣೆಯನ್ನು ಅವರು ಗಮನಿಸಿದ್ದರು. ಕೆಲಸ ಬೇಡಾಂದ್ರೆ ಬಿಡು. ಇಲ್ಲೇ ಏನಾದ್ರೂ ಕೆಲಸ ನೋಡುವಿಯಂತೆ ಎಂದರು.

ಸಂಜೆಯಾಗುತ್ತಲೇ ಒತ್ತಾಯ ಹೇರಿ ನನ್ನನ್ನು ಸಿನಿಮಾಕ್ಕೆ ಕರೆದೊಯ್ದರು. ಕೆಲಸದಾಕೆ ಮಾಡಿದ ಒಂದು ತಪ್ಪಿಗೆ ಯಜಮಾನಿ ಆಕೆಯನ್ನು ಪೊಲೀಸರಿಗೆ ಹಿಡಿದುಕೊಟ್ಟ ದೃಶ್ಯವೊಂದು ಸಿನಿಮಾದಲ್ಲಿತ್ತು. ನನ್ನ ಒಡತಿ ಆಕೆಗಿಂತ ಸಾವಿರ ಪಾಲು ಮೇಲು ಎನ್ನಿಸಿತು. ಅಷ್ಟಾಗಿಯೂ ಆಕೆ ನನ್ನನ್ನು ಕರೆದು ಕಾಫಿ, ತಿಂಡಿ ಕೊಟ್ಟರು. ನಂಬಿಕೆಯಿಂದ ಪೇಟೆಗೆ ಕಳುಹಿಸಿದರು. ನನ್ನ ತಪ್ಪನ್ನು ಮನ್ನಿಸಿದರು.

'ಅಲ್ಲಿಂದ ಮುಂದೆ ಸಿನಿಮಾದಲ್ಲಿ ಮನಸ್ಸು ನಿಲ್ಲಲಿಲ್ಲ. ಯಜಮಾನಿಯ ನೆನಪಾಯಿತು. ಯಜಮಾನ್ರು ಏನಂದುಕೊಳ್ತಾರೊ ಏನೊ. ಅವರು ಪಾರ್ಟಿಯಿಂದ ಬರೋದಕ್ಕೆ ಮೊದಲೇ ಮನೆ ಸೇರಿ ಅಮ್ಮಾವ್ರ ಕ್ಷಮೆ ಕೇಳಬೇಕು ಎಂದುಕೊಂಡೆ. ಸಿನಿಮಾವನ್ನೂ ಗೆಳೆಯರನ್ನೂ ಅಲ್ಲೇ ಬಿಟ್ಟು ಮಾರ್ಕೆಟ್ಟಿಗೆ ಬಂದು, ತರಕಾರಿ, ಮೀನು, ಚಿಕನ್ ತಗೊಂಡು ನೆಟ್ಟಗೆ ಕೊಡವೂರಿಗೆ ಬಸ್ಸು ಹತ್ತಿದೆ. ಬಸ್ಸಿಳಿದು ಮನೆಗೆ ನಡೆಯುತ್ತಿದ್ದೆ. ವಾಹನವಾಗಲೀ ಜನಸಂಚಾರವಾಗಲೀ ಇರದ ಒಂಟಿ ಮಾರ್ಗ. ಗಾಢ ಕತ್ತಲೆ. ಕರಿಮಾಯಿ ಗುಡ್ಡ ನಡುಕ ಹುಟ್ಟಿಸುತ್ತಿತ್ತು. ಅಂದಾಜಿನಲ್ಲಿ ನಡೆಯುತ್ತ ಮನೆಯ ಗೇಟಿಗೆ ತಲುಪಿದೆ. ನೋಡುತ್ತೇನೆ; ಗೇಟಿಗಿಂತ ತುಸು ದೂರದಲ್ಲಿ ಕಾರೊಂದು ನಿಂತಿರೋ ಥರ ಕಾಣಿಸ್ತು. ಕತ್ತಲಲ್ಲಿ ಯಾರದಿರಬಹುದೆಂದು ಸ್ಪಷ್ಟವಾಗಲಿಲ್ಲ. ಯಜಮಾನ್ರ ಕಾರಾಗಿದ್ದರೆ ಹತ್ತಿಕೊಂಡು ಮನೆಯ ಶೆಡ್ಡಿಗೇ ಬಂದುಬಿಡುತ್ತಿತ್ತು. ಮಾತ್ರವಲ್ಲದೆ ಅವರು ಪಾರ್ಟಿಯಿಂದ ಬರುವ ಹೊತ್ತೂ ಆಗಿರಲಿಲ್ಲ.

ಪೊಲೀಸರಿಗೆ ಸಿಕ್ಕಿಬಿದ್ದ ದೀಪು ನಡೆದ ಘಟನೆಯನ್ನು ವಿವರಿಸತೊಡಗಿದ.

'ನೋಡೋಣ, ಹೇಗೂ ಒಳಗೆ ಹೋದ ಮೇಲೆ ತಿಳೀತದಲ್ಲ ಎಂದುಕೊಂಡು ಮೆಟ್ಟಿಲೇರಿದೆ. ಹೊರಗಿನ ಬೆಳಕಾಗಲೀ ಒಳಗಿನ ಬೆಳಕಾಗಲೀ ಉರಿಯುತ್ತಿರಲಿಲ್ಲ. ಅಮ್ಮಾವ್ರ ಕೋಣೆಯ ಬೆಳಕು ಮಾತ್ರ ಉರಿಯುತ್ತಿತ್ತು. ಮನೆಯ ಹತ್ತಿರ ತಲುಪುತ್ತಿದ್ದಂತೆಯೆ ಸಣ್ಣಕೆ ಅಮ್ಮಾವ್ರ ಆರ್ತನಾದ ಕೇಳಿಸ್ತು! ಜೊತೆಗೆ ಗಂಡಸಿನ ಅಸ್ಪಷ್ಟ ಧ್ವನಿ. ಬಾಗಿಲು ತೆರೆದೇ ಇತ್ತು. ಸುತ್ತ ಕತ್ತಲಿತ್ತು. ಮೆಲ್ಲಗೆ ಒಳಗೆ ಹೋದೆ. ಕೋಣೆಯ ಒಳಗೆ ಅಮ್ಮಾವ್ರು ಕೊನೆಯ ಶ್ವಾಸ ಬಿಡಲು ಹೊಡಚಾಡುತ್ತಿದ್ದಿರಬೇಕು, ಅಂಥ ಧ್ವನಿ. ಕುತ್ತಿಗೆಯನ್ನು ಅಮುಕಿದಾಗ ಹೊರಡುವ ಕೀರಲು ಧ್ವನಿ. ನನ್ನ ಧೈರ್ಯ ಉಡುಗಿಹೋಯಿತು.

ಕೊಲೆಗಡುಕನೂ ನಾನೂ ಒಂದೇ ಮನೆಯಲ್ಲಿದ್ದೆವು! ಕಾಲುಗಳು ಗಡಗಡ ನಡುಗಿದವು. ಕೈಯಲ್ಲಿದ್ದ ಚೀಲ ಅಲ್ಲೇ ಜಾರಿ ಬಿತ್ತು. ಮತ್ತೂ ಮುಂದಕ್ಕೆ ಹೋಗಲು